ಮೂಲ ದಾವಾ ಸಂಃ 23/2022

ಪ್ರಾ.ಸಾ.1

**<u>ದಿನಾಂಕಃ 19.07.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ– ಶ್ರೀ.ಹೆಚ್.ಬಿ.ಸಿ. 3 ಮತ್ತು 4 ನೇ ಪ್ರತಿವಾದಿಯ ಪರ ವಕೀಲರಿಂದಃ</u>**

ನಾನು ಪುಟ್ಟೇಗೌಡರವರ ಮಗಳು ಎಂದು ತೋರಿಸಲು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನನ್ನ ತಂದೆ ದಿಃ07.11.2015 ರಂದು ಮರಣ ಹೊಂದಿರುತ್ತಾರೆ. ಅವರು ಬದುಕಿರುವರೆಗೂ ಅವರಿಗೆ ಸಮಾಜದಲ್ಲಿ ಒಳ್ಳೆಯ ಹೆಸರಿತ್ತು ಎಂದರೆ ಸರಿ. ಅವರಿಗೆ ಯಾವುದೇ ದುಶ್ಚಟಗಳು ಇರಲಿಲ್ಲ ಎಂದರೆ ಧೂಮಪಾನ ಮಾಡುತ್ತಿದ್ದರು. 1 ನೇ ಪ್ರತಿವಾದಿಗೆ ಯಾವುದೇ ದುಶ್ಚಟ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು 1 ನೇ ಪ್ರತಿವಾದಿಯು ನಮ್ಮ ಮೂಲ ಕುಟುಂಬಕ್ಕೆ ಒಳ್ಳೆಯದನ್ನು ಮಾಡಿದ್ದಾರೆ ಎಂದರೆ ಸರಿ.

ನಾನು ಮತ್ತು 2 ನೇ ವಾದಿಯು ಸೇರಿ 1 ಮತ್ತು 2 ನೇ ಪ್ರತಿವಾದಿಯರಿಗೆ ದಾವಾಸ್ತಿ ಕ್ರ.ಸಂ.2 ರ ಕುರಿತು ನೊಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿ. ಆ ಬಗ್ಗೆ ನಮ್ಮ ತಕರಾರು ಇಲ್ಲ ಎಂದರೆ ಸರಿ.

ದಾವಾಸ್ತಿ ಕ್ರ.ಸಂ.1 ರ ಚೆಕ್ಕುಬಂದಿಯನ್ನು 1 ನೇ ಪ್ರತಿವಾದಿಯು ಹೇಳಿದ್ದಾರೆ ಎಂದರೆ ಸರಿ. ಅದರ ದಾಖಲೆಯನ್ನು 1 ನೇ ಪ್ರತಿವಾದಿ ನನಗೆ ನೀಡಿದ್ದಾರೆ ಎಂದರೆ ಸರಿಯಲ್ಲ.

ಮೂಲ ದಾವಾ ಸಂಃ 23/2022

ಪ್ರಾ.ಸಾ.1

ದಾವಾಸ್ತಿ ಕ್ರ.ಸಂ.1 ಮತ್ತು 2ರ ಆಸ್ತಿಯನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಸರಿ. ಆ ಆಸ್ತಿಗಳಿಂದ ಬಂದ ಆದಾಯದಿಂದ ನನ್ನ ತಂದೆ ಮತ್ತು 1ನೇ ಪ್ರತಿವಾದಿ ಕುಟುಂಬವನ್ನು ಮೇಲ್ವಿಚಾರಣೆ ಮಾಡುತ್ತಿದ್ದರು ಎಂದರೆ ಸರಿ, ದಾವಾಸ್ತಿ ಕ್ರ.ಸಂ. 2 ರಿಂದ ಮಾತ್ರ ಆದಾಯ ಬರುತ್ತಿದ್ದು, ದಾವಾಸ್ತಿ ಕ್ರ.ಸಂ.1 ರಿಂದ ಆದಾಯ ಬರುತ್ತಿರಲಿಲ್ಲ. ಆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿಲ್ಲ.

ನಮ್ಮ ಮತ್ತು 1, 2ನೇ ಪ್ರತಿವಾದಿಯರ ನಡುವೆ 2020ರವರೆಗೂ ಒಳ್ಳೆಯ ಒಡನಾಟವಿತ್ತು. ಕುಟುಂಬದಲ್ಲಿ ಆಗುತ್ತಿದ್ದ ವ್ಯವಹಾರಗಳ ಬಗ್ಗೆ ನಮಗೆ 2020ರವರೆಗೂ ಗೊತ್ತಿತ್ತು. ಹಾಗಾಗಿ 1 ಮತ್ತು 2ನೇ ಪ್ರತಿವಾದಿಯರು 3ನೇ ಪ್ರತಿವಾದಿಗೆ ದಿಃ04.06.2007ರಂದು ದಾವಾಸ್ತಿ ಕ್ರ.ಸಂ.1ರ ಕುರಿತು ಮಾಡಿರುವ ಕ್ರಯಪತ್ರದ ಬಗ್ಗೆ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಾನು ನನ್ನ ತವರು ಊರಿಗೆ ಬಂದಾಗ ದಾವಾಸ್ತಿ ಕ್ರ.ಸಂ.1 ಯಾರ ಸ್ವಾಧೀನದಲ್ಲಿದೆ ಎಂದು ವಿಚಾರಿಸಿಲ್ಲ. ಅದರಲ್ಲಿ ಇಟ್ಟಿಗೆ ಗೂಡು ಮತ್ತು ಮಳಿಗೆ ಇರುವುದನ್ನು ನೋಡಿದ್ದೀರಾ ಎಂದರೆ, ನಾನು ಅಲ್ಲಿಗೆ ಹೋಗಿಲ್ಲ. ಸುಮಾರು 15 ವರ್ಷಗಳಿಂದ ಆ ಆಸ್ತಿಯ ಸ್ವಾಧೀನವು 3 ಮತ್ತು 4ನೇ ಪ್ರತಿವಾದಿಯರ ಬಳಿ ಇದೆ ಎಂದರೆ 1ನೇ ಪ್ರತಿವಾದಿಯ ಮೂಲಕ ಅವರಿಗೆ ಕ್ರಯ

ಮಾಡಿರುವ ವಿಷಯ ನನಗೆ ತಿಳಿಯಿತು. ಆ ವಿಷಯವು ನನಗೆ 2020 ರಲ್ಲಿ ತಿಳಿಯಿತು.

2000 ನೇ ಸಾಲಿನಲ್ಲಿ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಕಗ್ಗಲಿಪುರ ಗ್ರಾಮದ ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಕುಟುಂಬದ ಅಗತ್ಯಕ್ಕಾಗಿ ಸಾಲ ಪಡೆದಿದ್ದರು ಎಂದರೆ, ನನಗೆ ಗೊತ್ತಿಲ್ಲ. 2000 ರಿಂದ 2006 ನೇ ಸಾಲಿನವರೆಗೆ ದಾವಾಸ್ತಿ ಕ್ರ.ಸಂ.2 ರ ಪಹಣಿ ಪತ್ರಿಕೆಗಳನ್ನು ನಾನು ಪರಿಶೀಲಿಸಿಲ್ಲ.

ನಮ್ಮ ವಿವಾಹದ ವೇಳೆಗೆ ತಗುಲಿದ್ದ ಖರ್ಚಿಗಾಗಿ ನನ್ನ ತಂದೆ ಸಾಲ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ವಿವಾಹದ ವೇಳೆಗೆ ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಯಾರಿಂದ ಸಾಲ ಪಡೆದಿದ್ದರು ಎಂದು ನನಗೆ ಮಾಹಿತಿ ಇದೆ ಎಂದರೆ, ನಮ್ಮ ವಿವಾಹದ ವೇಳೆಗೆ ನಮ್ಮ ಕುಟುಂಬದಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದು, ಅದರಿಂದ ಬಂದ ಹಣವನ್ನು ನನ್ನ ತಾಯಿ ಉಳಿಸಿದ್ದು, ನಮ್ಮ ವಿವಾಹವು ಸರಳವಾಗಿ ಆಗಿದ್ದು, ನಮ್ಮ ವಿವಾಹದ ವೇಳೆಗೆ ನಮ್ಮ ತವರು ಮನೆಯವರು ಯಾವುದೇ ವರದಕ್ಷಿಣೆ ನೀಡಿರುವುದಿಲ್ಲ. ಆ ವಿಷಯವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ.

ದಾವಾಸ್ತಿ ಕ್ರ.ಸಂ.2 ರಿಂದ ಬಂದ ಆದಾಯವು ನಮ್ಮ ತವರು ಕುಟುಂಬಕ್ಕೆ ಸಾಲದೇ, ನನ್ನ ತಂದೆ ಮತ್ತು 1 ನೇ ಪ್ರತಿವಾದಿ ಮಾಡಿದ್ದ ಸಾಲವನ್ನು ತೀರಿಸುವ ಸಲುವಾಗಿ ಅವರು 3 ನೇ ಪ್ರತಿವಾದಿಗೆ ದಾವಾಸ್ತಿ ಕ್ರ.ಸಂ.1 ರ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ತಿ ಕ್ರ.ಸಂ.1 ಮತ್ತು 2 ಮೂಲತಃ ನನ್ನ ತಂದೆಯ ತಂದೆ ಕುಳ್ಳೇಗೌಡರಿಗೆ ಸೇರಿದ್ದು ಎಂದರೆ ಸರಿ. ಅವರೇ ಅವುಗಳ ಸಂಪೂರ್ಣ ಮಾಲೀಕರು ಆಗಿದ್ದರು ಎಂದರೆ ಸರಿ. ಅವರ ಮರಣದ ನಂತರ ನನ್ನ ತಂದೆ ಮತ್ತು ಅವರ ಸಹೋದರರು ಸದರಿ ಕುಳ್ಳೇಗೌಡರ ಆಸ್ತಿಗಳನ್ನು 2005-06 ನೇ ಸಾಲಿನಲ್ಲಿ ವಿಭಾಗಿಸಿಕೊಂಡಿದ್ದು, ಆ ವಿಭಾಗದಲ್ಲಿ ದಾವಾಸ್ತಿ ಕ್ರ.ಸಂ.1 ನನ್ನ ತಂದೆಯ ಭಾಗಕ್ಕೆ ಬಂದಿದೆ ಎಂದರೆ ಸರಿ. ಹಾಗಾಗಿ ಆ ಆಸ್ತಿಗೆ ನನ್ನ ತಂದೆಯೇ ಸಂಪೂರ್ಣ ಮಾಲೀಕರು ಎಂದರೆ ಸರಿ.

ನಮ್ಮ ಕುಟುಂಬದ ಕಾನೂನು ಬದ್ಧ ಅವಶ್ಯಕತೆಗಾಗಿ ದಾವಾಸ್ತಿ ಕ್ರ.ಸಂ.1 ನ್ನು ನನ್ನ ತಂದೆ, 1 ಮತ್ತು 2 ನೇ ಪ್ರತಿವಾದಿಯರು ಸೇರಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಕುರಿತು ನಾವು 3 ಮತ್ತು 4 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವಾವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆ ಆಸ್ತಿಯನ್ನು ಕುಟುಂಬದ ಅವಶ್ಯಕತೆಗಾಗಿ ಮಾರಾಟ

ಮಾಡಿರುವುದರಿಂದ ಅದರ ಕುರಿತು ನಾವು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಒತ್ತಾಸೆಯ ಮೇರೆಗೆ ನಾವು ಈ ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ,**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**